ಒಂದು ಲಕ್ಷ ರೂ.ಗಳಷ್ಟು ಪೆಂಡಿಂಗ್ ಬಿಲ್‌ಗಳಿವೆಯೆಂದು ತಿಳಿದು ಬಂದಿದೆ. ಗುಲ್ಬರ್ಗಾ ಜಿಲ್ಲೆಗೆ ಈಗಾಗಲೇ ೯.೭೨ ಲಕ್ಷ ರೂ.ಗಳನ್ನು ಪೆಂಡಿಂಗ್ ಬಿಲ್‌ಗಳನ್ನು ಚುಕ್ತಾ ಮಾಡುವ ಸಲುವಾಗಿ ಬಿಡುಗಡೆ ಮಾಡಲಾಗಿದೆ.

ಇ) ಗ್ರಾಮಸ್ಥರಿಂದ ಮೇವು ಸಾಗಾಣಿಕೆ ಮೊದಲು ವಾಹನ ಸೌಕರ್ಯಕ್ಕಾಗಿ ಬೇಡಿಕೆಗಳು ಬರುತ್ತಿವೆ.

ಈ) ಬೇಡಿಕೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಬರಪರಿಹಾರ ಕಾಮಗಾರಿಗಳು

೭೭(೨೭೦) ಶ್ರೀ ಯು. ಭೂಪತಿ(ಸಂಡೂರು).—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ(ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ, ಡಿಪಿಎಪಿ)ಯೋಜನೆಗಳನ್ನು ಹೊರತುಪಡಿಸಿ ಸರಕಾರದವರು ಖರ್ಚು ಮಾಡಿದ ಒಟ್ಟು ಹಣವೆಷ್ಟು ?

ಆ) ಜೂನ್ ತಿಂಗಳ ೩೦ಕ್ಕೆ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಮಳೆಯಾಗದಿದ್ದರೂ ಕೂಡ ಬರಗಾಲ ಪರಿಹಾರ ಕಾಮಗಾರಿಗಳನ್ನು ನಿಲ್ಲಿಸುವಂತೆ ಸರಕಾರದವರು ಆದೇಶ ಹೊರಡಿಸಿದ್ದು ನಿಜವೇ ?

ಇ) ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು ೭ಲಕ್ಷ ರೂಪಾಯಿಗಳಷ್ಟು ಬಟವಾಡೆಯಾಗಬೇಕಾಗಿದ್ದು ಇದರಿಂದ ಜಿಲ್ಲೆಯ ಜನತೆಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ರಾಜ್ಯದಲ್ಲಿ ಮಳೆ ಬೀಳದ ವಿವಿಧ ಭಾಗಗಳಲ್ಲಿ ಬರಗಾಲ ಪರಿಸ್ಥಿತಿ ಮುಂದುವರೆದಿದ್ದು, ಅಂತಹ ಭಾಗಗಳಲ್ಲಿ ಬರಗಾಲ ಪರಿಹಾರ ಕಾಮಗಾರಿಗಳನ್ನು ಮುಂದುವರಿಸಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ, ಡಿಪಿಎಪಿ ಯೋಜನೆಗಳನ್ನು ಹೊರತುಪಡಿಸಿ ಅಭಾವ ಪರಿಹಾರ ಶೀರ್ಷಿಕೆಯಡಿಯಲ್ಲೇ ೧೯೮೫-೮೬ನೇ ಸಾಲಿನಲ್ಲಿ ೭೬.೧೪ ಕೋಟಿ ರೂಪಾಯಿಗಳನ್ನು ಹಾಗೂ ೧೯೮೬-೮೭ನೇ ಸಾಲಿನಲ್ಲಿ ೪೩.೫೬ ಕೋಟಿ ರೂಪಾಗಳನ್ನು ಖರ್ಚು ಮಾಡಲಾಗಿದೆ.

ಆ) ಇಲ್ಲ. ಒಂದು ಪಕ್ಷದಲ್ಲಿ ಅಭಾವ ಪರಿಸ್ಥಿತಿಯು ಮುಂದುವರಿದಾದಲ್ಲಿ, ಸಾಮಾನ್ಯ ಆಯವ್ಯಯದ ಹಣದಿಂದ ಪರಿಹಾರ ಕಾರ್ಯಕ್ರಮಗಳನ್ನು ನಡೆಸಲು ಆದೇಶಿಸಲಾಗಿದೆ.

ಇ) ಬಳ್ಳಾರಿ ಜಿಲ್ಲಾಧಿಕಾರಿಯವರು ಒಂದು ತಾತ್ಕಾಲಿಕ ವರದಿ ಸಲ್ಲಿಸಿ, ಅದರಲ್ಲಿ ಇನ್ನೂ ೭ಳ ೫೬ ಲಕ್ಷ ರೂಪಾಯಿಗಳನ್ನು ಬಟವಾಡೆಯಾಗಬೇಕಾಗಿದೆಯೆಂದು ಮತ್ತು ಇದರ ಬಗ್ಗೆ ಮತ್ತೊಮ್ಮೆ ಕೂಲಂಕುಷವಾಗಿ ಪರಿಶೀಲಿಸಿ ಸದ್ಯದಲ್ಲೇ ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಸುವುದಾಗಿ ತಿಳಿಸಿರುತ್ತಾರೆ. ಸರ್ಕಾರವು ಈಗಾಗಲೇ ೯.೦೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಬಾಕಿ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು.

ಈ) ಸಾಕಷ್ಟು ಮಳೆ ಬೀಳದ ಕೆಲವು ಭಾಗಗಳಲ್ಲಿ ಮತ್ತೆ ಅಭಾವ ಪರಿಸ್ಥಿತಿಯು ಉದ್ಭವವಾದಲ್ಲಿ ಅಂತಹ ಕಡೆಗಳಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ಮುಂದುವರಿಸಲು ರಾಜ್ಯ ಸರ್ಕಾರವು ಬದ್ಧವಾಗಿದ್ದು, ಸದ್ಯದಲ್ಲಿಯೇ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು.

ಪ್ರವಾಸಿಗರಿಗೆ ಪ್ರವಾಸ ಮಾಹಿತಿ ಹಾಗೂ ವಸತಿಯನ್ನು ಕಲ್ಪಿಸುವುದು

೭೮(೭೨)ಶ್ರೀಮತಿ ಮುಖ್ತಾರುನ್ನಿಸ(ನರಸಿಂಹರಾಜ).—ಮಾನ್ಯ ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಚಾಮುಂಡಿ ಬೆಟ್ಟದಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವತೆಯ ಸ್ಥಳ ಪುರಾಣ ಮತ್ತು ಚಾರಿತ್ರಿಕ ವಿಷಯಗಳ ಬಗ್ಗೆ ಯಾತ್ರಿಕರ ಅನುಕೂಲಕ್ಕಾಗಿ ಎಲ್ಲಾ ಭಾಷೆಗಳಲ್ಲಿ ಟೂರಿಸ್ಟ್ ಗೈಡುಗಳನ್ನು ಸರ್ಕಾರದಿಂದ ಪ್ರಕಟಿಸಲಾಗಿದೆಯೇ ?

ಆ) ಚಾಮುಂಡಿ ಬೆಟ್ಟದಲ್ಲಿ ಯಾತ್ರಿಕರ ಅನುಕೂಲಕ್ಕಾಗಿ ಸೂಕ್ತ ಪ್ರವಾಸಿ ಮಂದಿರಗಳಾಗಲಿ ಧರ್ಮಶಾಲೆಗಳಾಗಲಿ ಅಥವಾ ಉಪಹಾರ ಗೃಹವಾಗಲೀ ಇರುವುದಿಲ್ಲವೆಂಬುದು ನಿಜವೇ ?